SM – 073

B.com. 24

## ನಾಲ್ಕನೇ ಸೆಮಿಸ್ಟರ್ ಬಿ.ಕಾಂ. ಪರೀಕ್ಷೆ, ಮೇ/ಜೂನ್ 2018
## (ರಿಪೀಟರ್ಸ್) (2012-13 and Onwards)
## ಕನ್ನಡ ಭಾಷಾ ಪತ್ರಿಕೆ – IV
## ಸಾಹಿತ್ಯ ಸಲ್ಲಾಪ – 2 ಮತ್ತು ವ್ಯಾವಹಾರಿಕ ಕನ್ನಡ

ST. CLARET COLLEGE LIBRARY

ಸಮಯ : 3 ಗಂಟೆಗಳು  ಗರಿಷ್ಠಾಂಕಗಳು : 100

### ಭಾಗ – 1
### (ಸಾಹಿತ್ಯ ಸಲ್ಲಾಪ – 2)

I. ಈ ಪದ್ಯದ ಭಾವಾರ್ಥವನ್ನು ಬರೆಯಿರಿ. **(1×5=5)**

ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು;
ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ
ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲ ಶೃಂಗಾರ ;
ದೃಢವಿಲ್ಲದ ಭಕ್ತಿ ಅಡಿ ಒಡೆದ ಕುಂಭದಲ್ಲಿ ಸುಜಲವ ತುಂಬಿದಂತೆ
ಮಾರಯ್ಯ ಪ್ರಿಯ ಅಮುಗೇಶ್ವರ ಲಿಂಗವ ಮುಟ್ಟದ ಭಕ್ತಿ

II. ಮೂರು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. **(3×5=15)**

1) ಸರೋಜಳ ಕನಸಿನ ಗಂಡ ಬೆಳಗಾದ ಕೂಡಲೇ ಮಾಡುತ್ತಿದ್ದ ಕೆಲಸಗಳು.
2) ವಿಜ್ಞಾನಿ ರಾಧಾಕೃಷ್ಣನ್ ಅವರು ತುಲಾಭಾರ ಮಾಡಿಸಿಕೊಂಡ ಪ್ರಸಂಗ.
3) ಅಲ್ಲಮನ ದೃಷ್ಟಿಯಲ್ಲಿ ಗುರು–ಶಿಷ್ಯ ಸಂಬಂಧದ ವಿವಿಧ ಹಂತಗಳು.
4) ಮಾರ ಔಷಧಿ ಬೀಳನ್ನು ಗಿಡಕ್ಕೆ ಗಂಟು ಹಾಕಲು ಕಾರಣ.
5) ನವಗ್ರಹಗಳ ಬಗ್ಗೆ ಜ್ಯೋತಿಷಿಗಳ ವಿವರಣೆ.

III. ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. **(3×12=36)**

1) ಬುದ್ಧ ಮತ್ತು ಬೆಳದಿಂಗಳು ಕವಿತೆಯ ಆಶಯವನ್ನು ವಿವರಿಸಿ.
2) ಕಥಾನಾಯಕಿ ಸರೋಜಳಿಗೆ ಸಿಕ್ಕ ಬಿಡುಗಡೆಯ ಸ್ವರೂಪವನ್ನು ವಿವರಿಸಿ.
3) ಮೂಲಿಕೆ ಬಳ್ಳಿಯ ಸುತ್ತ ಹರಡಿಕೊಂಡಿರುವ ಸ್ವಾರಸ್ಯಕರ ಸಂಗತಿಗಳನ್ನು ನಿರೂಪಿಸಿ.
4) ಗ್ರಹಣಕಾಲದಲ್ಲಿ ಟಿ.ವಿ. ನೋಡಬಾರದೆಂದು ಲೇಖಕರು ಹೇಳಲು ಕಾರಣವೇನು ? ವಿವರಿಸಿ.
5) ಹಸಿವಿನ ಬಗ್ಗೆ ವಚನಕಾರರ ನಿಲುವನ್ನು ವಿವರಿಸಿ.

ಪು.ತಿ.ನೋ.

## ಭಾಗ - 2
## (ವ್ಯಾವಹಾರಿಕ ಕನ್ನಡ)

IV. ನಾಲ್ಕಕ್ಕೆ ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ. (4×5=20)

1) ಕನ್ನುಡಿ ವೆಬ್‌ಸೈಟ್

2) ಇ-ವ್ಯವಹಾರ

3) ಕಾರ್ಯಕ್ರಮ ಪಟ್ಟಿ

4) ಏಕವ್ಯಕ್ತಿ ವರದಿ

5) ಒ.ಸಿ.ಆರ್.

6) ಫ್ಯಾಕ್ಸ್.

V. ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. (2×12=24)

1) ಆಹ್ವಾನ ಪತ್ರಿಕೆಯ ಲಕ್ಷಣಗಳು ಯಾವುವು ? ನಿಮ್ಮ ಕಾಲೇಜಿನ ಕಾರ್ಯಕ್ರಮವೊಂದರ ಆಹ್ವಾನ ಪತ್ರಿಕೆಯೊಂದನ್ನು ಸಿದ್ಧಪಡಿಸಿ.

2) ಜಾಹೀರಾತುಗಳು ಮಾಡುವ ಕೆಲಸಗಳನ್ನು ವಿವರಿಸಿ.

3) ಪತ್ರಿಕಾ ವರದಿಯ ಯಾವುದಾದರೂ ನಾಲ್ಕು ವಿಧಗಳನ್ನು ಪರಿಚಯಿಸಿ.

4) ಕನ್ನಡದಲ್ಲಿ ಕಂಪ್ಯೂಟರ್ ಬಳಕೆಯನ್ನು ಕುರಿತು ಬರೆಯಿರಿ.

---